# ಜರೀನಾಳೆಂಬ ಬಾಲೆ

ಕಾ.ತ. ಚಿಕ್ಕಣ್ಣ

ಕಲೆ: ಎಸ್.ವಿ. ಹೂಗಾರ್



ಹೊತ್ತು ಮೇಲೇರುತ್ತಿತ್ತು. ಬಿರು ಬಿಸಿಲಿನ ಜೊತೆಗೆ ಸುತ್ತಮುತ್ತಲ ಕಟ್ಟಡಗಳಿಗೆ ತಾಕಿ ಪ್ರತಿಫಲಿಸುತ್ತಿದ್ದ ಕಾವೂ ಸೇರಿ ವ್ಯಗ್ರಗೊಂಡ ಝಳ ಚಟಚಟಿಲ್ಲನೆ ಕುಣಿಯುತ್ತಿತ್ತು. ಹೆಂಗಸರು ಮಕ್ಕಳಾದಿಯಾಗಿ ಕಾದು ನಿಂತಿದ್ದ ಮಂದಿ ಇನಿತು ಗಾಳಿ ಸೂಸದ ಕಡು ಝಳಕ್ಕೆ ಜಿನುಗುತ್ತಿದ್ದ ಬೆವರನ್ನು ಎದೆಗವಚಿಕೊಂಡು ಹದ್ದುಗಣ್ಣಾಗಿ ಗೇಟಿನತ್ತಲೇ ನೋಡುತ್ತಿದ್ದರು.

ಮೊದಲಿದ್ದ ತೆಂಗಿನತೋಟವನ್ನು ನೆಲಸಮ ಮಾಡಿ ಹೊಸದಾಗಿ ನಿರ್ಮಿಸಿದ್ದ ಸಿಲಿಕಾನ್ ಲೇಔಟಿನ ಕಿರು ಬಡಾವಣೆಯೊಳಗೆ ಹೋಗಿ ಬರಲು ಇರುವುದೊಂದೇ ಗೇಟು. ಆ ಗೇಟಿನ ಬಳಿ ಬೆಳಗಿನಿಂದಲೂ ಸೆಕ್ಯುರಿಟಿ ಸಿಬ್ಬಂದಿ ಕಾಣುತ್ತಿರಲಿಲ್ಲ. ಗೇಟಿನೊಳಗಿನ ಕಟ್ಟಡಗಳ ನಿವಾಸಿಗಳ ಸುಳಿವೂ ಇರಲಿಲ್ಲ. ಅವರೆಲ್ಲ ಹೊರಗಿನವರ ಸಂಪರ್ಕ ಕಡಿದುಕೊಂಡು ಮೇವು ಕೂಡಿಸಿಕೊಂಡು ಬಿಲ ಹೊಕ್ಕ ಇಲಿಗಳಂತೆ ಗೂಡು ಸೇರಿಕೊಂಡಿದ್ದರು. ಲೇಔಟಿನ ಒಡೆಯ ದಿನಸಿಯನ್ನು ಉಚಿತವಾಗಿ ಕೊಡುತ್ತಿದ್ದಾರೆಂಬ ಸುದ್ದಿ ಮೂರನೆಯ ದಿನಕ್ಕೆ ವ್ಯಾಪಕವಾಗಿ ಹಬ್ಬಿ, ಇವತ್ತು ಸಂದಿಗೊಂದಿ ಪ್ರದೇಶಗಳಿಂದ ಮುಂಗಾರು ಮೊದಲ ಮಳೆಯ ನೀರಿಗೆ ಮೀನು ಮುನ್ನುಗ್ಗುವಂತೆ ಮಂದಿ ನುಗ್ಗಿಬಂದು ಫುಟ್‌ಪಾತ್ ಮೇಲೆ, ರಸ್ತೆಯಂಚಿನ ಮರಗಳ ಕೆಳಗೆ, ಕಟ್ಟಡಗಳ ಸೆರಗಿನಲ್ಲಿ ಗುಂಪು ಗುಂಪಾಗಿ ನೆರೆದಿದ್ದರು. ಆ ಗುಂಪುಗಳಲ್ಲಿ ಹೊಸದಾಗಿ ಬಂದ ಹುಡುಗಿಯರು ದಿನಸಿ ಬ್ಯಾಗನ್ನು ಗಲ್ಲಕ್ಕೊತ್ತಿಕೊಂಡು ಹಿರೀಕರ ಮಾತಿಗಾಗಿ ಪಿಳಿಪಿಳಿ ನೋಡುತ್ತಾ ಕಾಯುತ್ತಿದ್ದರೆ, ರೂಢಿಯಿದ್ದ ಹುಡುಗಿಯರು ಇವರಿಗೆ ದಿಟ ಗೊತ್ತಿದ್ದರೆ ತಾನೆ ಮಾತು ಕೇಳಿಸಿಕೊಳ್ಳುವುದು ಎಂಬಂತೆ ತಲೆಮೇಲೆ ಬ್ಯಾಗು ಕವಚಿಕೊಂಡು ನಿಂತಿದ್ದರು. ಜರೀನಾ ಮಾತ್ರ ಯಾವ ಗುಂಪಿಗೂ ಸೇರದೆ ತಲೆಗೆ ಟವಲು ಮರೆಮಾಡಿಕೊಂಡು ಆಚೆದೂರದ ಮರದಡಿ ಅಪರಿಚಿತಳಾಗಿ ನಿಂತಿದ್ದಳು. ಅವಳ ಕಣ್ಣು ಕಿವಿಗಳು ಗೇಟಿನತ್ತಲೇ ನೆಟ್ಟಿದ್ದವು. ಮರದ ತುದಿಮರೆಯ ಕೋಗಿಲೆಯನ್ನು ಹುಡುಕುತ್ತ, ಅದರ ಚಿಕುಹೂ ರಾಗವನ್ನು ಅನುಕರಿಸುವ ಆಟದಲ್ಲಿ ಸಮಯ ಕಳೆದಿದ್ದ ಅವಳ ಮೂರೂವರೆ ವರ್ಷದ ತಮ್ಮ, ಕೋಗಿಲೆಯ ಕೌತುಕವನ್ನು, ಅದರ ರಾಗದ ಜಾಡನ್ನು ಮರೆತಿದ್ದ. ಮನೆಕಡೆಯ ಸೆಳೆತ ಶುರುವಾಗಿತ್ತು. ಈಗವನು ತನ್ನ ತಲೆ, ಕತ್ತು, ಮೂಗು, ಮುಖದಿಂದ ಜಿನುಗುತ್ತಿದ್ದ ಬೆವರಿನ ತೊರೆಯನ್ನು ಹರಿಯಲು ಬಿಟ್ಟು ಅಕ್ಕನ ಕೈ ಹಿಡಿದು ಕುಸುಗುತ್ತ, ಕೊರಗುತ್ತ, ಜಗ್ಗಾಡುತ್ತ ಗೂಟಕ್ಕೆ ಬಿಗಿದ ಎಳೆಗರುವಿನಂತೆ ಸುತ್ತುತ್ತಿದ್ದ.

ಜರೀನಾ ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕೂತಿದ್ದಳು. ಆದರೆ ಅವಳ ಎತ್ತರ, ಆಕಾರ, ರೂಪದಲ್ಲಿ ಪದವಿ ಓದುತ್ತಿರುವಂತೆ ಕಾಣುತ್ತಿದ್ದಳು. ತಮ್ಮನ ಜಗ್ಗಾಟದ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಇನ್ನೊಂದು ಕೈಯಿಂದ ಮುಖದ ಮೇಲಿಂದ ಇಳಿಯುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತ ಮುದುರಿ ನಿಂತಿದ್ದಳು. ಒಮ್ಮೊಮ್ಮೆ ಬೆವರು ಕಣ್ಣುರೆಪ್ಪೆ ಹಾದು, ಗುಡ್ಡೆ ಮೇಲೆ ಇಳಿದುಬಿಡುತ್ತಿತ್ತು. ಆಗ ಮಾತ್ರ ಗೇಟು ಸರಿಯಾಗಿ ಕಾಣುತ್ತಿರಲಿಲ್ಲ. ಆಗವಳು ಹೆಚ್ಚು ಆತಂಕಗೊಳ್ಳುತ್ತಿದ್ದಳು. ಗೇಟು ತೆರೆದು ದಿನಸಿ ಹಂಚಲು ಶುರು ಮಾಡಿದರೆ... ತಾನು ಹಿಂದೆ ಉಳಿದು ದಿನಸಿ ಮುಗಿದು ಹೋದರೆ... ಹಾಸಿಗೆ ಹಿಡಿದಿರುವ ಅವ್ವನಿಗೆ ಇವತ್ತಾದರೂ ಗಂಜಿ ಸಿಗದಿದ್ದರೆ... ಚಟಪಟಿಸುತ್ತಿರುವ ತಮ್ಮನ ಈ ಕಿರು ಆಸೆಯೂ ಕೈಗೂಡದೆ ಅಳಲು ಪ್ರಾರಂಭಿಸಿದರೆ

ಹೀಗೆ ನಾನಾ ಆತಂಕಗಳೆಲ್ಲ ಒಗ್ಗೂಡಿ ಭಯ ಶುರುವಾಗಿಬಿಡುತ್ತಿತ್ತು. ಒಂದು ಕ್ಷಣದ ಬೆವರುಗಣ್ಣಿನ ದೃಷ್ಟಿದೋಷ ಎಂಥ ಘೋರ ಅನಾಹುತಕ್ಕೆ ಈಡು ಮಾಡಿಬಿಡುವುದಲ್ಲ ಎಂದು ಬೆಚ್ಚಿ, ಭೀತಿ ಇನ್ನಷ್ಟು ಇಮ್ಮಡಿಗೊಂಡು ಸಸಸಸನೆ ಕಣ್ಣು ಉಜ್ಜಿ, ಕಣ್ಣೊಳಗಿನ ಬೆವರು ಕಣಗಳನ್ನೆಲ್ಲ ಒರೆಸಿಕೊಂಡು ಕತ್ತನ್ನು ಆಚೀಚೆ ಬಾಗಿಸಿ ಆರಂಭದಲ್ಲಿ ಮಾಯದ ಗಾಯದಂತೆ ದುಡಿಯುತ್ತಿದ್ದ ಅಂಜಿಕೆ, ಅಳುಕುಗಳನ್ನು ಬಿಗಿ ಹಿಡಿದು ತವಕದಿಂದ ಗೇಟಿನತ್ತಲೇ ನೋಡತೊಡಗಿದಳು.

ಜರೀನಾಗೆ ಇದು ಹೊಸತು. ಹಿಂಗೆ ನೀಡುವವರ ಮನೆ ಮುಂದೆ ನಿಂತು ಬೇಡಿ ತರುವಂಥ ಸಂದರ್ಭವನ್ನು ಅಪ್ಪನಾಗಲೀ ಅವ್ವನಾಗಲೀ ಒದಗಿಸಿರಲಿಲ್ಲ.

ನೂರಲ್ ಹಸನ್ ಗಾರ್ಮೆಂಟ್ ಫ್ಯಾಕ್ಟರಿಯ ಮಾಲೀಕರ ಖಾಸಗಿ ಡ್ರೈವರು. ಆತ ಹೆಂಡತಿ ಮಕ್ಕಳನ್ನು ಬೇಡಿ ತಂದುಣ್ಣುವ ಸ್ಥಿತಿಗೆ ದೂಡಿರಲಿಲ್ಲ. ಮಗಳನ್ನು ಮಾಲೀಕರ ಪುಟ್ಟಕ್ಕನಂತೆ ಚೆನ್ನಾಗಿ ಓದಿಸಿ ದೊಡ್ಡ ಅಧಿಕಾರಿ ಮಾಡಬೇಕೆಂದು ಬಯಸಿದ್ದ. ಮಾಲೀಕರೂ ಬಿಡುವಾದ ದಿನ ವಿಚಾರಿಸಿಕೊಳ್ಳುತ್ತ, ‘ಮಕ್ಕಳಿಗೆ ವಿದ್ಯೆ ಕೊಡಿಸು. ಅವರು ಬುದ್ಧಿವಂತರಾಗಿ ಮುಂದೆ ತಮ್ಮ ಬದುಕು ಕಟ್ಟಿಕೊಳ್ಳುತ್ತಾರೆ’ ಅಂತ ವಿವೇಕ ಹೇಳುತ್ತಿದ್ದರು. ನೂರಲ್ ಹಸನ್ ತನ್ನ ಮಾಲೀಕರ ಮಾತನ್ನು ಬದ್ಧತೆಯಿಂದ ಪಾಲಿಸುತ್ತಿದ್ದ. ಮಗಳ ಓದಿಗೆ ಕೊರತೆಯೊದಗಿ ಅವಳು ಕೊರಗುವಂತೆ ಮಾಡಲಿಲ್ಲ. ಹೆಂಡತಿಗೂ ‘ಬೇಟಿಕೆ ಹತ್ರ ನಮ್ ತಕ್ಲೀಫ್ ತೋಡಿಕೊಂಡು ಬೇಟಿಕೆ ದಿಲ್ ಕೆಡಿಸಬೇಡ. ಬೇಟಿ ಅಚ್ಛಾ ಓದುವಂತೆ ನೋಡಿಕೊ. ನಂದು ಮಾಲೀಕ್ ಅರಸಪ್ಪಾಗೆ